ಕಳೆದರ್ಷ ಇದೇ ಸಮಯದಲ್ಲಿ, ಇದೇ ಸೆಶನ್‌ನಲ್ಲಿ ಆದಂಥ ಚರ್ಚೆ ಸಮಯದಲ್ಲಿ ತಾವೇ ಒಂದು ಸೂಚನೆಯನ್ನು ಕೊಟ್ಟಿದ್ದೀರಿ. ಕೋಟ್ಯಾಂತರ ರೂಪಾಯಿ ಹಣ ಖರ್ಚುಮಾಡಿರುವಂಥ ಆಸ್ಪತ್ರೆಯಲ್ಲಿ, ತಕ್ಷಣದಲ್ಲಿಯೇ ಒಂದು ಆಕ್ಸಿಡೆಂಟ್ ಆಸ್ಪತ್ರೆಯನ್ನು ನರರೋಗಿಗಳದ್ದು ಅಲ್ಲಿ ಮಾಡಬೇಕು, ಎಂದು ಹೇಳಿದ್ದೆವು. ಆ ಕಟ್ಟಡ ಇವತ್ತಿನವರೆಗೂ ಹಾಗೇ ಉಳಿದಿದೆಯೆನ್ನುವಂಥ ಪ್ರಶ್ನೆ ಇಲ್ಲಿ ಬಂದಿದೆ ಅಷ್ಟೆ. ಒಂದು ವರ್ಷ ಆಯಿತು ಅವರು ಪ್ರಾಮಿಸ್ ಮಾಡಿ, ಇದೇ ಹೌಸ್‌ನಲ್ಲಿ. ಇವತ್ತಿನವರೆಗೂ ಅಲ್ಲಿ ಏನೂ ಕೆಲಸ ಆಗಿಲ್ಲ ಎನ್ನುವ ಮಾತನ್ನು ಮಾತ್ರ ನಾವು ಇಲ್ಲಿ ಕೇಳುತ್ತಿದ್ದೇವೆ, ಮಾನ್ಯ ಅಧ್ಯಕ್ಷರೇ, ತಮ್ಮಿಂದಲೇ ಒಂದು ಸೂಚನೆ ಹೋಗಿತ್ತು.

ಅಧ್ಯಕ್ಷರು: ಆಯಿತು. ಮುಂದಿನ ಪ್ರಶ್ನೆ ಮಾನ್ಯ ಕುಮಾರ್ ಬಂಗಾರಪ್ಪನವರು

ಶ್ರೀ ಕೆ.ಎಸ್.ಈಶ್ವರಪ್ಪ: ಕಳೆದಬಾರಿ ಪ್ರಾಮಿಸ್ ಮಾಡಿದ್ದುದು ಆಗಿಲ್ಲವೆಂದರೆ ಏನು ಮಾಡಬೇಕು ಹೇಳಿ. ಶಿವಮೊಗ್ಗದಲ್ಲಿ ಕೂಡ ಅದೇ ಪ್ರಕಾರವಾಗಿ ಆಗಿದೆ. ಇಡೀ ಬಿಲ್ಡಿಂಗ್ ರೆಡಿ ಇದೆ. ಉದ್ಘಾಟನೆ ಆಗಿಲ್ಲ. ಇದು ಯಾಕೆ ಎಂದು ಅರ್ಥವಾಗುವುದಿಲ್ಲ.

ಅಧ್ಯಕ್ಷರು: ಒಂದು ಕೆಲಸ ಮಾಡಿ. ಪ್ರೊಸೀಡಿಂಗ್ಸ್ ತೆಗೆದುಕೊಳ್ಳಿ, ಏನೇನು ನಡೆದಿದೆ ಎಂದು ನೋಡಿ. ವಾಸ್ತವಾಂಶವನ್ನು ನೋಡಿಕೊಳ್ಳಿ, ಆಕ್ಷನ್ ತೆಗೆದುಕೊಳ್ಳಿ, ರೂಲ್ಸ್ ಓದಿ, ಅದಕ್ಕೆ ಅವಕಾಶ ಇದೆ. ನನ್ನ ಮಾತನ್ನು ಕೇಳಿ. Initiate action against the Minister. ಸಿಕ್ಕಿಹಾಕಿಸಿ ಮಂತ್ರಿಗಳನ್ನು ಅವರು ಹೇಳಿದ ಹಾಗೆ ನಡೆದುಕೊಂಡಿಲ್ಲ ಎಂದರೆ, ಪ್ರಾಮಿಸ್ ಮಾಡಿದ್ದರು ಎಂದರೆ ನಮ್ಮ ನಿಯಮಾವಳಿಯಲ್ಲಿ ಅವಕಾಶ ಇದೆ. ಕ್ರಮ ಜರುಗಿಸಿ, ಅಷ್ಟೆ.

(ಗೊಂದಲ)

ಈಗ ಕುಮಾರ ಬಂಗಾರಪ್ಪನವರು ನಿಂತಿದ್ದಾರೆ ನೋಡಿ.

ಶ್ರೀ ಹೆಚ್.ಶಂಕರಲಿಂಗೇಗೌಡ: ಹಕ್ಕುಚ್ಯುತಿಗೆ ಹಾಕುತ್ತೇನೆ ಈಗ.

ಶ್ರೀ ಕೆ.ಎನ್.ಈಶ್ವರಪ್ಪ: ಸಾರ್, ಒಂದು ಮಾಡಬಹುದು. ಇವರು ಆಶ್ವಾಸನೆ ಕೊಟ್ಟಿರುವುದರ ಬಗ್ಗೆ ನಾವು ಕಾನೂನು ಪ್ರಕಾರ ಹೋಗುವುದು ಬೇಡ. ಯಾರ್ಯಾರು ಆಶ್ವಾಸನೆಗಳನ್ನು ಕೊಟ್ಟಿದ್ದಾರಲ್ಲಾ, ಈ ಮಂತ್ರಿಗಳನ್ನೆಲ್ಲಾ ಒಂದು ಸಾರಿ ಈ ಕೃಷ್ಣ ರಾಜೇಂದ್ರ ಆಸ್ಪತ್ರೆಗೆ ಕಳುಹಿಸಿಬಿಡಿ, ಸಾಕು.

ಸೊರಬದ ಸಾರ್ವಜನಿಕ ಆಸ್ಪತ್ರೆಯಲ್ಲಿರುವ ವೈದ್ಯರು ಹಾಗೂ ಸಿಬ್ಬಂದಿಗಳ ಹುದ್ದೆ

ಶ್ರೀ ಎಸ್.ಕುಮಾರ್ ಬಂಗಾರಪ್ಪ (ಸೊರಬ): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಸೊರಬ ತಾಲ್ಲೂಕಿನ ಸಾರ್ವಜನಿಕ ಆಸ್ಪತ್ರೆ ಮತ್ತು ಸಾರ್ವಜನಿಕ ಆರೋಗ್ಯ ಕೇಂದ್ರ ಮತ್ತು ಘಟಕಗಳಲ್ಲಿ ವೈದ್ಯರುಗಳ ಹಾಗೂ ಸಿಬ್ಬಂದಿಗಳ ಎಷ್ಟು ಹುದ್ದೆಗಳು ಖಾಲಿ ಇವೆ. ಈ ಕೊರತೆಯಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2. ಬಂದಿದ್ದಲ್ಲಿ ಅವುಗಳನ್ನು ಭರ್ತಿ ಮಾಡಲು ಸರ್ಕಾರವು ತೆಗೆದುಕೊಂಡ ಕ್ರಮಗಳೇನು?

ಶ್ರೀ ಹೆಚ್.ಸಿ.ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

1. ಸೊರಬ ತಾಲ್ಲೂಕಿನ ಸಾರ್ವಜನಿಕ ಆಸ್ಪತ್ರೆಯಲ್ಲಿ ವೈದ್ಯರು ಹಾಗೂ ಸಿಬ್ಬಂದಿಗಳ ಒಟ್ಟು 89 ಹುದ್ದೆಗಳು ಖಾಲಿ ಇವೆ. ಸಾರ್ವಜನಿಕರಿಗೆ ತೊಂದರೆ ಆಗುತ್ತಿರುವುದನ್ನು ಗಮನಿಸಿ, ಕೆಳಕಂಡ ಕ್ರಮ ಕೈಗೊಳ್ಳಲಾಗುತ್ತಿದೆ.

2. ತಾಲ್ಲೂಕು ಮಟ್ಟದಲ್ಲಿ ಖಾಲಿ ಇರುವ ವೈದ್ಯರ ಹುದ್ದೆಗಳನ್ನು ಸಾಮಾನ್ಯ ವರ್ಗಾವಣೆ ಸಮಯದಲ್ಲಿ ಭರ್ತಿ ಮಾಡಲಾಗುವುದು. ಜೊತೆಗೆ ಗ್ರಾಮಾಂತರ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಖಾಲಿ ಇರುವ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ತುಂಬಲು ಜಿಲ್ಲಾಧಿಕಾರಿಗಳಿಗೆ ಅಧಿಕಾರ ನೀಡಲಾಗಿದೆ. ಖಾಲಿ ಇರುವ ಇತರ ಹುದ್ದೆಗಳನ್ನು ನೇರ ನೇಮಕಾತಿಯಿಂದ ತುಂಬಲು ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಇವರು ಅರ್ಜಿಗಳನ್ನು ಕರೆದಿದ್ದು, ಹಾಲಿ ಸಂದರ್ಶನ ಪ್ರಕ್ರಿಯೆ ಪ್ರಗತಿಯಲ್ಲಿದೆ. ಸಧ್ಯದಲ್ಲಿ ನೇಮಕಾತಿ ಮಾಡಲಾಗುವುದು.

ಶ್ರೀ ಎಸ್.ಕುಮಾರ್ ಬಂಗಾರಪ್ಪ: ಮಾನ್ಯ ಅಧ್ಯಕ್ಷರೇ, ಉತ್ತರವನ್ನು ಕೊಟ್ಟಿದ್ದಾರೆ. ಇದಕ್ಕೆ ಪೂರಕವಾಗಿ ನಮ್ಮ ಸೊರಬ ತಾಲ್ಲೂಕಿನಲ್ಲಿ ಆನವಟ್ಟಿ ಎಂದು ಹೇಳಿ ಒಂದು ಆಸ್ಪತ್ರೆಯನ್ನು ಅಪ್‌ಗ್ರೇಡ್ ಮಾಡುವುದಕ್ಕೆ ಒಂದು ಪತ್ರವನ್ನು ಕೂಡ ನಾನು ಕಳಿಸಿದ್ದೆ. ಅಲ್ಲಿ ಕಟ್ಟಡ ಎಲ್ಲ ಆಗಿ ರೆಡಿ ಇದ್ದರೂ ಕೂಡ, ಹೋದ ಸಲ ನಾನು ಸದನದಲ್ಲಿ ಈ ಬಗ್ಗೆ ಪ್ರಸ್ತಾಪ ಮಾಡಿದ್ದೆ. ಅದರ ಬಗ್ಗೆ ಕೂಡ ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಡಾ॥ ಹೆಚ್.ಸಿ.ಮಹದೇವಪ್ಪ: ಆನವಟ್ಟಿ ಆಸ್ಪತ್ರೆಯನ್ನು ಮೇಲ್ದರ್ಜೆಗೆ ಏರಿಸಬೇಕೆಂದು ಹೇಳಿ ಮಾನ್ಯ ಸದಸ್ಯರು ಪತ್ರವನ್ನು ಕಳಿಸಿದ್ದಾರೆ. ಅದನ್ನು ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇನೆ. ಮತ್ತು ಉಳಿದಿರತಕ್ಕಂಥ ಖಾಲಿ ಹುದ್ದೆಗಳನ್ನು

ತುಂಬುವುದಕ್ಕೆ ಈಗಾಗಲೇ ನಿರ್ದೇಶಕರ ಮಟ್ಟದಲ್ಲಿ ನೇರ ನೇಮಕಾತಿ ಪ್ರಕ್ರಿಯೆ ಪ್ರಾರಂಭವಾಗಿದೆ. ಆದಷ್ಟು ಬೇಗ ಅವುಗಳನ್ನು ತುಂಬುತ್ತೇವೆ. ಮತ್ತು ಖಾಲಿ ಇರುವ ವೈದ್ಯರ ಹುದ್ದೆಗಳನ್ನು ನೇರವಾಗಿ ಜಿಲ್ಲಾಧಿಕಾರಿಗಳಿಗೇ ಅಧಿಕಾರವನ್ನು ಕೊಟ್ಟಿದ್ದು, ಚುನಾವಣೆ ಇದ್ದುದರಿಂದ ಸ್ವಲ್ಪ ಒಂದು ತಿಂಗಳು ತಡವಾಗಿದೆ. ಮತ್ತೆ ತಕ್ಷಣ ಅದನ್ನು ಪ್ರಾರಂಭ ಮಾಡುತ್ತೇವೆ.

ಅಧ್ಯಕ್ಷರು: ಸಮಾಧಾನ ಆಯಿತೇ?

ಶ್ರೀ ಎಸ್.ಕುಮಾರ್ ಬಂಗಾರಪ್ಪ: ಅಧ್ಯಕ್ಷರೇ, ಖಾಲಿ ಇರುವ ಹುದ್ದೆಗಳನ್ನು ತುಂಬುವುದು ಇದು ಎರಡು ವರ್ಷಗಳಿಂದ ನಡೆಯುತ್ತಲೇ ಇದೆ. ಇವತ್ತು ಆಗುತ್ತದೆ, ನಾಳೆ ಆಗುತ್ತದೆ ಎಂದು ಹೇಳಿ ಅದು ಮುಂದಕ್ಕೆ ಹೋಗುತ್ತಲೇ ಇದೆ. ಈವಾಗ ಒಂದು ತಿಂಗಳು ಎಂದು ಹೇಳಿದ್ದೀರಿ. ಆದ್ದರಿಂದ ಅದು ಓ.ಕೆ.ಆದರೆ ಈ ಆನವಟ್ಟಿ ಆಸ್ಪತ್ರೆಯನ್ನು ಅಪ್‌ಗ್ರೇಡೇಶನ್ ಮಾಡುವ ವಿಚಾರದಲ್ಲಿ ಅಲ್ಲಿ ಬೇರೆ ಏನೂ ಇಲ್ಲ. ನೀವು ಪರ್ಮಿಶನ್ ಕೊಟ್ಟರೆ, ಉಳಿದಿರತೆಕ್ಕಂಥ ಸವಲತ್ತುಗಳನ್ನು ಕೊಟ್ಟರೆ ಸಾಕು. ಕಟ್ಟಡ ಆಗುವುದು ಅಥವಾ ಪರಿಶೀಲನೆ ಮಾಡತಕ್ಕಂಥಾದ್ದು ಯಾವುದೂ ಅವಶ್ಯಕತೆ ಇಲ್ಲ. ಏಕೆಂದರೆ ಎಲ್ಲ ಪರಿಶೀಲನೆ ಮಾಡಿಬಿಟ್ಟು ಅಲ್ಲಿಂದ ಲೆಟರ್ ಕೂಡ ಬಂದಾಗಿದೆ. ತಾವು ಅದರ ಬಗ್ಗೆ ಸ್ವಲ್ಪ ಗಮನ ಕೊಟ್ಟರೆ ಬಹಳ ಉಪಯೋಗವಾಗುತ್ತದೆ.

ಡಾ॥ ಹೆಚ್.ಸಿ.ಮಹದೇವಪ್ಪ: ಅದನ್ನು ನೋಡುತ್ತೇನೆ.

ಬೆಂಗಳೂರು ನಗರದಲ್ಲಿ ಪೂರ್ವ ಪ್ರೈಮರಿ ಹಾಗೂ ಪ್ರೈಮರಿ ತರಗತಿಗಳ ಪ್ರವೇಶಕ್ಕಾಗಿ ಮಕ್ಕಳಿಗೆ ಪ್ರವೇಶ ಪರೀಕ್ಷೆ ನಡೆಸುತ್ತಿರುವುದು.

21(72)

ಶ್ರೀ ರಾಮಲಿಂಗಾರೆಡ್ಡಿ (ಜಯನಗರ): ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ಪೂರ್ವ ಪ್ರೈಮರಿ ಹಾಗೂ ಪ್ರೈಮರಿ ತರಗತಿಗಳ ಪ್ರವೇಶಕ್ಕಾಗಿ ಮಕ್ಕಳಿಗೆ ಪ್ರವೇಶ ಪರೀಕ್ಷೆ ನಡೆಸುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಎಳೆಯ ಮಕ್ಕಳ ಮೇಲೆ ಆಗತಕ್ಕ ದುಷ್ಪರಿಣಾಮವನ್ನು ನಿವಾರಿಸಲು ಸರ್ಕಾರ ಇಂತಹ ಪ್ರವೇಶ ಪರೀಕ್ಷೆಗಳನ್ನು ನಡೆಸುವುದನ್ನು ನಿಷೇಧಿಸುತ್ತದೆಯೇ?

ಶ್ರೀ ಹೆಚ್.ಸಿ.ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು):